## ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.

ದಿನಾಂಕ: 09.02.2023 ರಂದು ಬೆಳಿಗ್ಗೆ 11.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದಲ್ಲಿ, ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.

### ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಪಾರ್ವತಿ ಸಿ. ಎಸ್. ಡೀನರು | ಸದಸ್ಯರು |
| 3. | ಪ್ರೊ. ಪಿ. ಭಾಸ್ಕರ್, ಡೀನರು | ಸದಸ್ಯರು |
| 4. | ಪ್ರೊ. ನುಸ್ರತ್ ಫಾತಿಮಾ, ಡೀನರು | ಸದಸ್ಯರು |
| 5. | ಶ್ರೀ ರಾಜ ಶ್ರೀನಿವಾಸ್ | ಸದಸ್ಯರು |
| 6. | ಶ್ರೀ ಬಿ.ಎಸ್.ಸುರಗಿಮಠ | ಸದಸ್ಯರು |
| 7. | ಶ್ರೀ ಮಲ್ಲಿಕಾರ್ಜುನ ಹಳ್ಳೂರ | ಸದಸ್ಯರು |
| 8. | ಡಾ. ಶಶಿಕಲಾ ಎನ್.ಓಗಿ | ಸದಸ್ಯರು |
| 9. | ಶ್ರೀ ಅಭಿಲಾಶ್ ಐದನಾಳ | ಸದಸ್ಯರು |
| 10. | ಶ್ರೀಮತಿ ಲೀನಾ ಹುಳಗೇರಿ | ಸದಸ್ಯರು |
| 11. | ಡಾ॥ ನೇಹಾ ಸುಖಾನಿ | ಸದಸ್ಯರು |
| 12. | ಡಾ. ಶಿವರಾಜ ದೇಶಮುಖ್ | ಸದಸ್ಯರು |
| 13. | ಡಾ. ಶರಣರೆಡ್ಡಿ ಕೋಡ್ಲ | ಸದಸ್ಯರು |
| 14. | ಡಾ. ಇಕ್ಬಾಲ್ ಶೇಖ್, | ಸದಸ್ಯರು |
| 15. | ಶ್ರೀ. ಬಸವರಾಜ. ವಾಯ್., | ಸದಸ್ಯರು |
| 16. | ಡಾ. ಎ.ಆರ್. ಪುರವಂತ, | ಸದಸ್ಯರು |
| 17. | ಶ್ರೀ. ಟಿ. ಶಿವಪ್ರಸಾದ ರಾವ್, | ಸದಸ್ಯರು |
| 18. | ಶ್ರೀ. ಫಾದರ ಜ್ಯೋಷಿ ಪುತ್ತೂರು, | ಸದಸ್ಯರು |
| 19. | ಶ್ರೀ. ಎನ್. ಸತೀಶ, | ಸದಸ್ಯರು |
| 20. | ಶ್ರೀ. ಕಿಶನ್ ರಾಥೋಡ, | ಸದಸ್ಯರು |
| 21. | ಶ್ರೀ ಪಾಂಡು, ಪ್ರಾಂಶುಪಾಲರು, | ಸದಸ್ಯರು |
| 22. | ಡಾ. ಮಲ್ಲಿಕಾರ್ಜುನ ಎಂ. ಕುಲಕರ್ಣಿ, | ಸದಸ್ಯರು |
| 23. | ಶ್ರೀ. ಮೊಹ್ಮದ್ ಮುಜಾಕೀರ್ ಅಲಿ, | ಸದಸ್ಯರು |
| 24. | ಗ್ರಂಥಪಾಲಕರು | ಸದಸ್ಯರು |
| 25. | ಹಣಕಾಸು ಅಧಿಕಾರಿಗಳು | ಸದಸ್ಯರು |
| 26. | ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, | ಸದಸ್ಯರು |
| 27. | ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 28. | ಪ್ರೊ. ವಿಶ್ವನಾಥ ಎಂ., ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳನ್ನು ಸ್ವಾಗತಿಸಿ ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಕಲಂ/ಐಟಂ ನಂ. | ವಿಷಯ | ಸಾಮಾನ್ಯ ವಿದ್ಯಾವಿಷಯಕ ಪರಿಷತ್ ನಿರ್ಣಯ |
|---|---|---|
| 1. | ದಿನಾಂಕ: 23.08.2022 ಹಾಗೂ 19.12.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಮತ್ತು ವಿಶೇಷ ಸಭೆಯ ನಡವಳಿಗಳನ್ನು | ದಿನಾಂಕ: 23.08.2022 ಹಾಗೂ 19.12.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಮತ್ತು ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |
| 2. | ರಾಯಚೂರು ವಿಶ್ವವಿದ್ಯಾಲಯದ ಅಡಿಯಲ್ಲಿ ಅಲ್ಪಾವಧಿಯ ಕೋರ್ಸ್‌ಗಳಾದ ಯೋಗ, ಸಂಗೀತ ಮತ್ತು ಲಲಿತ ಕಲೆಗಳ ಸರ್ಟಿಫಕೇಟ್ ಕೋರ್ಸುಗಳ ಪರಿನಿಯಮಾವಳಿಗಳ ಅನುಮೋದನೆ. | ವಿಶ್ವವಿದ್ಯಾಲಯಕ್ಕೆ ವಿವಿಧ ಸಂಘಟನೆಗಳು, ವಿದ್ಯಾರ್ಥಿಗಳು ಹಾಗೂ ಕಲ್ಯಾಣ ಕರ್ನಾಟಕ ಭಾಗದ ಸಮುದಾಯದ ಪರವಾಗಿ ವಿಶ್ವವಿದ್ಯಾಲಯದಲ್ಲಿ ಯೋಗ, ಸಂಗೀತ ಹಾಗೂ ಲಲಿತಕಲೆ ಸ್ನಾತಕೋತ್ತರ ಅಧ್ಯಯನ ವಿಭಾಗಗಳನ್ನು ಪ್ರಾರಂಭಿಸಲು ಮನವಿಗಳನ್ನು ನೀಡಿರುತ್ತಾರೆ. ಪ್ರಸ್ತುತ ರಾಯಚೂರು ವಿಶ್ವವಿದ್ಯಾಲಯದಲ್ಲಿ 20 ವಿವಿಧ ಅಧ್ಯಯನ ವಿಭಾಗಗಳು ಕಾರ್ಯ ನಿರ್ವಹಿಸುತ್ತಿದ್ದು ಹೊಸ ವಿಭಾಗಗಳನ್ನು ಪ್ರಾರಂಭಮಾಡಲು ವಿಶ್ವವಿದ್ಯಾಲಯದ ಆರ್ಥಿಕ ಹಾಗೂ ಭೌತಿಕ ಬೆಳವಣಿಗೆಗಳು ಸಶಕ್ತವಾಗಿಲ್ಲದಿರುವುದಿಲ್ಲ. ಅಧ್ಯಯನ ವಿಭಾಗಗಳನ್ನು ಪ್ರಾರಂಭಿಸುವ ಬದಲು ಯೋಗ, ಸಂಗೀತ ಹಾಗೂ ಲಲಿತಕಲೆ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ವಿಶ್ವವಿದ್ಯಾಲಯ ಇತರೆ ಸಂಸ್ಥೆಗಳೊಂದಿಗೆ ಸಂಯೋಜನೆ ಮಾಡಿಕೊಂಡು ಅಲ್ಪಾವಧಿ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಸಭೆಯಲ್ಲಿ ತೀರ್ಮಾನಿಸಿ ಅನುಮೋದಿಸಲಾಯಿತು. ಮುಂದುವರೆದು ವಿದ್ಯಾವಿಷಯಕ ಪರಿಷತ್‌ನ ಸದಸ್ಯರಾದ ಶಿವರಾಜ ದೇಶಮುಖ್‌ರವರ ಸಲಹೆಯಂತೆ ಇದೇ ರೀತಿ ಕಂಪ್ಯೂಟರ್ ಕೇಂದ್ರೀಕೃತ ಅಲ್ಪಾವಧಿ ಕೋರ್ಸ್‌ಗಳನ್ನು ನಡೆಸಲು ಸಲಹೆ ನೀಡಿದರು ಇದನ್ನು ಸಭೆಯು ಒಪ್ಪಿಗೆ ನೀಡಿ ಅನುಮೋದಿಸಿತು. ಮುಂದುವರೆದು, ಒಂದು ವರ್ಷ ಅಥವಾ ಅದಕ್ಕಿಂತ ಮೇಲ್ಪಟ್ಟ ಸರ್ಟಿಫಿಕೇಟ್/ಡಿಪ್ಲೋಮಾ ಕೋರ್ಸ್‌ಗಳನ್ನು ಪ್ರಾರಂಭಿಸಲು ಪರಿನಿಯಾಮವಳಿಗಳನ್ನು ವಿಶ್ವವಿದ್ಯಾಲಯದ ನಿಯಾಮಾನುಸಾರ ರೂಪಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು. |
| 3. | ರಾಯಚೂರು ವಿಶ್ವವಿದ್ಯಾಲಯದ 2022–23ನೇ ಆರ್ಥಿಕ ಸಾಲಿನ 2ನೇ ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದನೆಗೊಂಡ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯದ 2022–23ನೇ ಆರ್ಥಿಕ ಸಾಲಿನ 2ನೇ ಹಣಕಾಸು ಸಮಿತಿಯ ಸಭೆಯಲ್ಲಿ ಅನುಮೋದನೆಗೊಂಡ ಸಭೆಯ ನಡಾ ವಳಿಗಳನ್ನು ಅನುಮೋದಿಸಲಾಯಿತು. |
| 4. | ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳು. | --- |

(ಪ್ರೊ. ವಿಶ್ವನಾಥ ಎಂ.)
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

(ಪ್ರೊ. ಹರೀಶ್ ರಾಮಸ್ವಾಮಿ)
ಕುಲಪತಿಗಳು ಹಾಗೂ ಸಭೆಯ ಅಧ್ಯಕ್ಷರು,
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು